ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 75-82
©*IIMRD*, Mysuru

IIMRD JOURNALS

www.iimrd.com

# ಕರ್ನಾಟಕದಲ್ಲಿ ದಲಿತ ಚಳುವಳಿಯ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿಯ ಪಾತ್ರ

**ಆಶಾ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**ಸಾರಾಂಶ: (Abstract)**

*ದೇಶದಾದ್ಯಂತ ಕೆಳವರ್ಗಗಳು ಸಾಮಾಜಿಕ ಅಸಮಾನತೆಯ ತಾರತಮ್ಯಗಳಿಂದ ಬಿಡುಗಡೆ ಹೊಂದಲು ಕ್ರಿಯಾಶೀಲ ಚಟುವಟಿಕೆಗಳನ್ನು ಆರಂಭಿಸಿದವು. ಅಂತಹ ಚಳುವಳಿಗಳಲ್ಲಿ ಪ್ರಮುಖವಾದುದು ಭಾರತದ 'ದಲಿತ ಚಳುವಳಿ'. ಈ ಚಳುವಳಿಯ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಸುಮಾರು ಎರಡು ಸಾವಿರ ವರ್ಷಗಳ ನಂತರ ತಳಸಮುದಾಯಗಳು ತಮ್ಮ ಮೇಲೆ ನಡೆಯುತ್ತಿದ್ದ ಎಲ್ಲ ಬಗೆಯ ದೌರ್ಜನ್ಯ, ಅನ್ಯಾಯಗಳ ವಿರುದ್ಧ ದನಿ ಎತ್ತಿದ್ದವು. ದಲಿತ ಸಂಘರ್ಷ ಸಮಿತಿ 70ರ ದಶಕದಲ್ಲಿ ಮೊದಲ ಬಾರಿಗೆ ಹೋರಾಟದ ಮುಖೇನ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟವೇ ಸೂಕ್ತ ಎಂದು ನಿರ್ಧಾರ ಕೈಗೊಂಡರು. ಈ ಹೋರಾಟದ ಮುಂಚೂಣಿ ನಾಯಕರೆಂದರೆ ಪ್ರೊ. ಬಿ. ಕೃಷ್ಣಪ್ಪ, ದೇವನೂರ ಮಹಾದೇವ, ಡಾ. ಸಿದ್ದಲಿಂಗಯ್ಯ, ಬಿ. ವಿ. ಚಂದ್ರಪ್ರಸಾದ್ ತ್ಯಾಗಿ, ಎನ್. ಗಿರಿಯಪ್ಪ, ಎಂ. ಡಿ. ಗಂಗಯ್ಯ, ಎನ್. ವೆಂಕಟೇಶ್, ದೇವಯ್ಯ ಹರವೆ, ಎಚ್. ಗೋವಿಂದಯ್ಯ, ರಾಮದೇವ ರಾಕೆ, ಶಿವಾಜಿ ಗಣೇಶನ್, ಇಂದೂಧರ ಹೊನ್ನಾಪುರ, ಕೋಟಿಗಾನಹಳ್ಳಿ ರಾಮಯ್ಯ, ಕೆ. ಬಿ. ಸಿದ್ಧಯ್ಯ, ಸಿ. ಎಂ. ಮುನಿಯಪ್ಪ, ಓ. ಶ್ರೀಧರನ್, ಜಂಬಣ್ಣ ಅಮರಚಿಂತ, ಚನ್ನಣ್ಣ ವಾಲೀಕಾರ ಮುಂತಾದವರು. ಪ್ರಸ್ತುತ ಈ ಲೇಖನದಲ್ಲಿ ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಸೈದ್ಧಾಂತಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಮಾಡುವುದರಿಂದ ತಾತ್ವಿಕವಾಗಿ ಬರವಣಿಗೆಗಳ ಸಮೀಕ್ಷೆ ಮುಖ್ಯವಾಗುತ್ತದೆ. ಹಾಗಾಗೀ, ಭಾರತದ ಮತ್ತು ಕರ್ನಾಟಕದ ದಲಿತ ಹೋರಾಟದ ಚರಿತ್ರೆ ಹಾಗೂ ಸಿದ್ಧಾಂತಗಳನ್ನು ವಿಶ್ಲೇಷಿಸುವ ತಾತ್ತ್ವಿಕ ಬರಹಗಳನ್ನು ಸಾಹಿತ್ಯ ಪರಾಮರ್ಶಗೆ ಒಳಪಡಿಸಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ದಲಿತ ಚಳುವಳಿ, ಹೋರಾಟ, ದಲಿತ ಸಂಘರ್ಷ ಸಮಿತಿ, ಬರವಣಿಗೆಗಳು

## ಪೀಠಿಕೆ

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಭಾರತ ಸಾಮಾಜಿಕ ಸುಧಾರಣೆಗಳಿಗೆ ತೆರೆದುಕೊಂಡ ಕಾಲ. ಈ ಕಾಲಘಟ್ಟದಲ್ಲಿ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತು ಸಮುದಾಯಗಳಲ್ಲಿ ಅಸಮಾನತೆಯ ವಿರುದ್ಧದ ಧ್ವನಿಯಾಗಿ ಹಲವಾರು ಸಾಮಾಜಿಕ ಚಳುವಳಿಗಳು ಹುಟ್ಟಿಕೊಂಡವು. ಈ

*Please cite this article as:* ಆಶಾ. (2024). ಕರ್ನಾಟಕದಲ್ಲಿ ದಲಿತ ಚಳುವಳಿಯ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿಯ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 75–82

ಸಾಮಾಜಿಕ ಸುಧಾರಣಾ ಆಂದೋಲನ ದೇಶದಾದ್ಯಂತ ವಿವಿಧ ತಾತ್ತ್ವಿಕ ನೆಲೆಗಟ್ಟುಗಳಲ್ಲಿ ಭಾರತೀಯ ಸಮಾಜದಲ್ಲಿ ಆಳವಾಗಿ ನೆಲೆಯೂರಿದ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳನ್ನು ಪ್ರಶ್ನಿಸುವ, ಸುಧಾರಿಸುವ ಹಾಗೂ ಪರಿವರ್ತಿಸುವ ಪ್ರಯತ್ನಗಳನ್ನು ಮಾಡಿತು. ಭಾರತದ ಸಾಮಾಜಿಕ ಸನ್ನಿವೇಶದ ಭಾಗವಾಗಿದ್ದ ಜಾತಿ ಅಸಮಾನತೆ ತಳ ಸಮುದಾಯಗಳನ್ನು ಆಚರಣೆಗಳ ಹೆಸರಿನಲ್ಲಿ ಶೋಷಣೆಗೆ ಒಳಪಡಿಸಿತ್ತು. ವಸಾಹತುಶಾಹಿ ಆಧುನಿಕತೆ, ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಗೆ ತೆರೆದುಕೊಂಡ ಈ ಕಾಲಘಟ್ಟದ ಚರಿತ್ರೆ ವಿಭಿನ್ನ ಬಗೆಯ ಸಂದಿಗ್ಧಗಳನ್ನು ಮತ್ತು ಸಂಕೀರ್ಣತೆಗಳನ್ನು ಒಳಗೊಂಡಿದೆ. ಒಂದು ಅರ್ಥದಲ್ಲಿ ಸಾಮಾಜಿಕ ಸುಧಾರಣೆಯ ಈ ಇತಿಹಾಸ ಬಹುರೂಪಿಯಾದದ್ದು ಮಾತ್ರವಲ್ಲ ವಿಭಿನ್ನ ಪ್ರದೇಶ ಮತ್ತು ಕಾಲಘಟ್ಟದ ಚಳುವಳಿಗಳಿಂದ ಪ್ರೇರಿತವಾದದ್ದು.

ಶತಮಾನಗಳಿಂದ ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಆಳವಾಗಿ ಬೇರೂರಿದ್ದ ಜಾತಿ ಅಸಮಾನತೆಯ ವಿರುದ್ಧದ ದನಿಯನ್ನು ನಾವು ವಚನ ಚಳುವಳಿಯಲ್ಲಿ ಕಾಣಬಹುದು. 12ನೇ ಶತಮಾನದಲ್ಲಿ ವಚನಕಾರರು ಸಾಮಾಜಿಕ ಸುಧಾರಣೆಯ ಹರಿಕಾರರಾಗಿ ಜಾತಿ ಅಸಮಾನತೆಯನ್ನು ಪ್ರಶ್ನಿಸಿದ್ದಾರೆ. ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ದೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ ಮುಂತಾದ ಸಾಮಾಜಿಕ ಸುಧಾರಕರು ತಮ್ಮ ತಮ್ಮ ಅನುಭವದ ನೆಲೆಯಲ್ಲಿ ಎಲ್ಲ ಸಮುದಾಯಗಳನ್ನು ಸಮನಾಗಿ ಕಾಣುವ ಪ್ರಯತ್ನವನ್ನು ನಡೆಸಿದ್ದಾರೆ. ಸಾಮಾಜಿಕ ನ್ಯಾಯದ ಅರಿವು ಮೂಡಿಸುವಲ್ಲಿ ಶರಣರ ವಚನಗಳು, ದಾಸರ ಕೀರ್ತನೆಗಳು, ಸೂಫಿ ಸಂತರ ತತ್ತ್ವಪದಗಳು ಅದ್ಭುತ ಯಶಸ್ಸು ಸಾಧಿಸಿವೆ. 'ಜಾತಿ ಹೀನನ ಮನೆಯ ಜ್ಯೋತಿತಾಹೀನವೇ'? ಎಂಬ ಸರ್ವಜ್ಞನ ವಚನ, 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ'? ಎಂಬ ಕನಕದಾಸರ ಕೀರ್ತನೆ, 'ಸೋರುತಿಹುದು ಮನೆಯ ಮಾಳಗಿ ಅಜ್ಞಾನದಿಂದ' ಎಂಬ ಸಂತ ಶಿಶುನಾಳ ಶರೀಫರ ತತ್ತ್ವಪದ ಇಂದಿಗೂ ಜಾತಿಗಿಂತ ಮಿಗಿಲಾದ ಮಾನವತ್ವದ ಸಂದೇಶವನ್ನು ಸಾರುತ್ತದೆ. ವಿವಿಧ ಕಾಲಘಟ್ಟಗಳಲ್ಲಿ ವ್ಯವಸ್ಥೆಯ ವಿರುದ್ಧ ಹೋರಾಡುವ, ಜಾತಿ ಅಸಮಾನತೆಯ ವಿರುದ್ಧ ದನಿಯೆತ್ತುವ ಪ್ರಯತ್ನಗಳು ವಿಭಿನ್ನ ನೆಲೆಗಳಲ್ಲಿ ಆಗಿರುವುದರಿಂದ ಹತ್ತೊಂಭತ್ತನೆಯ ಶತಮಾನದ ಆದಿಭಾಗದಿಂದ ಆರಂಭಿಸಿ ಇಪ್ಪತ್ತನೆಯ ಶತಮಾನದ ಮಧ್ಯಭಾಗದ ತನಕ ಭಾರತದಲ್ಲಿ ಸಂಭವಿಸಿದ ಅನೇಕ ವಿದ್ಯಮಾನಗಳು ಭಾರತದ ಸಾಮಾಜಿಕ ಬದುಕಿನಲ್ಲಿ ಸಂಚಲನವನ್ನು ಉಂಟುಮಾಡಿದೆ. ಈ ಕಾಲಘಟ್ಟದಲ್ಲಿ ನಡೆದ ಚಳುವಳಿಗಳು ಹೊರನೋಟಕ್ಕೆ ಮಹಿಳಾ ಪ್ರಶ್ನೆಯನ್ನು ಮುಖ್ಯವಾಗಿರಿಸಿಕೊಂಡಂತೆ ಕಂಡರೂ ಜಾತಿಯ ಹೆಸರಿನಲ್ಲಿ ನಡೆದ ಶೋಷಣೆ ಮತ್ತು ಅಸಮಾನತೆಯನ್ನು ವಿರೋಧಿಸಿವೆ.

ಬಂಗಾಳದಲ್ಲಿ ರಾಮ್ ಮೋಹನ್ ರಾಯ್‌ರವರ ನೇತೃತ್ವದಲ್ಲಿ ನಡೆದ ಸಮಾಜ ಸುಧಾರಣೆಯ ಪ್ರಯತ್ನ, ದಯಾನಂದ ಸರಸ್ವತಿಯವರ ನೇತೃತ್ವದಲ್ಲಿ ಆರಂಭಗೊಂಡ ಆರ್ಯ ಸಮಾಜ, ಕೇಶವಚಂದ್ರ ಸೇನರ ನಾಯಕತ್ವದಲ್ಲಿ ಸ್ಥಾಪನೆಗೊಂಡ ಪ್ರಾರ್ಥನಾ ಸಮಾಜ ಹಾಗೂ ಈಶ್ವರಚಂದ್ರ ವಿದ್ಯಾಸಾಗರರ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯತ್ನಗಳು ಮಹಿಳೆಯರ ಬಗೆಗಿನ ಕಾಳಜಿಯನ್ನು ವ್ಯಕ್ತಪಡಿಸಿದರೂ

ಸಾಮಾಜಿಕ ಬದಲಾವಣೆಗೆ ತೆರೆದುಕೊಳ್ಳುವ ಪ್ರಯತ್ನದ ಭಾಗವೇ ಆಗಿರುತ್ತದೆ. ಮಹಾರಾಷ್ಟ್ರದಲ್ಲಿ ಜ್ಯೋತಿ ಬಾಪುಲೆ ಮತ್ತು ಸಾವಿತ್ರಿ ಭಾಯಿ ಪುಲೆಯವರುಗಳ ನೇತೃತ್ವದಲ್ಲಿ ಅರಂಭಗೊಂಡ ಮಹಿಳಾ ಶಿಕ್ಷಣ ಮತ್ತು ಜಾತಿ ವಿನಾಶದ ಹೋರಾಟ ಭಾರತದ ಸಮಾನತೆಯ ಪ್ರಶ್ನೆಯನ್ನು ಮುನ್ನೆಲೆಗೆ ತಂದಿತು. ಮಹಿಳೆಯರ ಜೊತೆಗೆ ತಳಸಮುದಾಯದವರು ಶಿಕ್ಷಣವನ್ನು ಪಡೆಯಬೇಕೆನ್ನುವ ಅವರ ಹೋರಾಟ ಭಾರತದ ಸಾಮಾಜಿಕ ಸನ್ನಿವೇಶವನ್ನು ಆಮೂಲಾಗ್ರವಾಗಿ ಬದಲಾಯಿಸಿತು. ಪುಲೆ ದಂಪತಿಗಳಿಗೆ ಶಿಕ್ಷಣ ಬರವಣಿಗೆ ಮಾತ್ರವಾಗಿರದೆ ಸಾಮಾಜಿಕ ಬದಲಾವಣೆಯನ್ನು ತರುವ ಸಾಧನವಾಗಿತ್ತು. ಈ ಸುಧಾರಣಾ ಹೋರಾಟ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ರೀತಿಯಲ್ಲಿ ವ್ಯಕ್ತಗೊಂಡಿತು. ಜಾತಿ ವ್ಯವಸ್ಥೆ, ಅಸ್ಪಶ್ಯತೆ, ಮಹಿಳೆಯರ ಸ್ಥಾನಮಾನ ಮತ್ತು ಅನೇಕ ಅಮಾನವೀಯ ಧಾರ್ಮಿಕ ಆಚರಣೆಗಳ ವಿರುದ್ಧ ಈ ವಿಭಿನ್ನ ಬಗೆಯ ಸಮಾಜ ಸುಧಾರಣ ಹೋರಾಟಗಳು ತಮ್ಮ ಪ್ರತಿಭಟನೆಯನ್ನು ತೋರಿಸಿವೆ.

19 ಮತ್ತು 20ನೆಯ ಶತಮಾನದ ಭಾರತದಲ್ಲಿ ಸಂಭವಿಸಿದ ಸಾಮಾಜಿಕ ಚಳುವಳಿಗಳು, ಸ್ವಾತಂತ್ರ್ಯ ಹೋರಾಟದ ಪ್ರಭಾವ ಕರ್ನಾಟಕದಲ್ಲಿಯೂ ವಿಭಿನ್ನ ರೂಪದಲ್ಲಿ ವ್ಯಕ್ತಗೊಂಡಿತು. ಈ ಕಾಲಘಟ್ಟದಲ್ಲಿ ಕರ್ನಾಟಕ ಅಗಾಧವಾದ ಸಾಮಾಜಿಕ, ಸಾಂಸ್ಕತಿಕ, ಆರ್ಥಿಕ ಮತ್ತು ರಾಜಕೀಯ ಪ್ರಾಮುಖ್ಯತೆಯ ಹಲವು ಬೆಳವಣಿಗೆಗೆ ಸಾಕ್ಷಿಯಾಯಿತು. ಒಟ್ಟಿನಲ್ಲಿ ಬಂಗಾಳ, ಮಹರಾಷ್ಟ್ರ, ಕರ್ನಾಟಕ ಮತ್ತು ಭಾರತದ ಅನೇಕ ಕಡೆಗಳಲ್ಲಿ ಸಂಭವಿಸಿದ ಸಮಾಜ ಸುಧಾರಣೆಯ ಪ್ರಯತ್ನಗಳು ಮುಂದೆ ದಲಿತ ಚಿಂತನೆ ಮತ್ತು ಚಳುವಳಿಯ ಹುಟ್ಟಿಗೆ ಪ್ರೇರಣೆಯನ್ನು ನೀಡಿತು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ಮತ್ತು ಸುಧಾರಿಸುವ ಪ್ರಯತ್ನಗಳಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರ ಪಾತ್ರ ಮಹತ್ವದ್ದಾಗಿದೆ. ಅವರ ಚಿಂತನೆ ಮತ್ತು ಕ್ರಿಯಾಚರಣೆಗಳಿಂದ ಪ್ರೇರಿತರಾದ ದಲಿತ ಸಮುದಾಯಗಳು ಸ್ವಾತಂತ್ರ್ಯನಂತರದ ಭಾರತದಲ್ಲಿ ತಮ್ಮ ಅಸ್ಮಿತೆಯನ್ನು ರೂಪಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ದಲಿತ ಚಳುವಳಿ ಹುಟ್ಟಿಕೊಂಡಿತು ಎಂದರೆ ತಪ್ಪಾಗಲಾರದು. ಅಂತೆಯೇ, ದಕ್ಷಿಣ ಭಾರತದ ದ್ರಾವಿಡ ಹೋರಾಟದ ನಾಯಕರಾದ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಹಾಗೂ ಸಮಾಜವಾದಿ ನಾಯಕರಾದ ರಾಮ ಮನೋಹರ ಲೋಹಿಯಾರವರು ದಲಿತ ಏಳಿಗೆಗಾಗಿ ನಡೆಸಿದ ಪ್ರಯತ್ನಗಳನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಸೂಕ್ತವಾಗಿಇದೆ. ಅಷ್ಟು ಮಾತ್ರವಲ್ಲದೇ, ಅಸ್ಪೃಶ್ಯತೆಯ ವಿರುದ್ಧ ಗಾಂಧೀಜಿಯವರು ನಡೆಸಿದ ನಿರಂತರ ಹೋರಾಟ ದಲಿತ ವಿಮೋಚನೆಯ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆಯುತ್ತಾರೆ.

ದಲಿತ ಚಳುವಳಿ ಭಾರತದ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಪರ ಹೋರಾಟದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ದಲಿತರು ಭಾರತದ ಸಮಾಜದಲ್ಲಿ ಶತಮಾನಗಳಿಂದ ಅನುಭವಿಸುತ್ತಿದ್ದ ಸಾಮಾಜಿಕ ಶೋಷಣೆಯ ವಿರುದ್ದ ದನಿಯಾಗಿ ದೇಶದ ಎಲ್ಲೆಡೆ ವಿವಿಧ ಸ್ವರೂಪದ ಚಳುವಳಿಗಳು ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯು ಆರಂಭಗೊಂಡಿತು. 1960 ಮತ್ತು 70ರ ದಶಕದಲ್ಲಿ ದೇಶಾದ್ಯಂತ ದಲಿತರ ಹಕ್ಕುಗಳಿಗಾಗಿ ನಡೆದ ಹೋರಾಟದ ಭಾಗವಾಗಿ ರೂಪುಗೊಂಡ ದಲಿತ ಸಂಘರ್ಷ ಸಮಿತಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ತನ್ನದೇ ನೆಲೆಯ ವಿಶಿಷ್ಟ

ಅಸ್ಮಿತೆಯೊಂದಿಗೆ ಗುರುತಿಸಿಕೊಂಡಿತು. ಒಂದು ನಿರ್ದಿಷ್ಟ ಘಟನೆ ಅಥವಾ ವ್ಯಕ್ತಿಯಿಂದ ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡಿತು ಎನ್ನುವ ಬದಲಾಗಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸಾಮಾಜಿಕ ಶೋಷಣೆಯ ವಿರುದ್ಧದ ದನಿಯಾಗಿ ದಲಿತ ಸಂಘರ್ಷ ಸಮಿತಿ ಹುಟ್ಟಿತು ಎಂದರೆ ತಪ್ಪಾಗಲಾರದು.

**ಅಧ್ಯಯನದ ಉದ್ದೇಶಗಳು**

- ಭಾರತದ ದಲಿತ ಚಿಂತನೆಯ ತಾತ್ತ್ವಿಕ ಸ್ವರೂಪವನ್ನು ಸಂಕ್ಷಿಪ್ತವಾಗಿ ನಿರೂಪಿಸುವುದು ಮತ್ತು ಅದು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಹಾಗೂ ಸವಾಲುಗಳನ್ನು ಗುರುತಿಸಿವುದು.
- ಭಾರತದಲ್ಲಿ ಸಂಭವಿಸಿದ ದಲಿತ ಚಳುವಳಿಯ ಚರಿತ್ರೆಯ ಪ್ರಮುಖ ಅಂಶ ಹಾಗೂ ಆಯಾಮಗಳನ್ನು ನಿರೂಪಿಸುವುದು.
- ಕರ್ನಾಟಕದಲ್ಲಿ ನಡೆದ ದಲಿತ ಚಳುವಳಿಯ ಚರಿತ್ರೆಯನ್ನು ದಾಖಲಿಸಿವುದು.
- ಈ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿಯ ಹುಟ್ಟು ಮತ್ತು ರೂಪುಗೊಳ್ಳುವಿಕೆಯ ಹಂತಗಳನ್ನು ಗುರುತಿಸುವುದು.
- ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ನಾಯಕತ್ವ ಮತ್ತು  ಸಂಘಟನಾ ಸ್ವರೂಪವನ್ನು ನಿಷ್ಕರ್ಶಿಸುವುದು
- ಕರ್ನಾಟಕದ ದಲಿತ ಹೋರಾಟದ ಮೇಲೆ ದಲಿತ ಸಂಘರ್ಷ ಸಮಿತಿಯ ಪ್ರಭಾವವನ್ನು ಗುರುತಿಸುವುದು
- ಕರ್ನಾಟಕದ ದಲಿತ ಚಳುವಳಿ ಮತ್ತು ದಲಿತ ಸಂಘರ್ಷ ಸಮಿತಿಯ ಪ್ರಸ್ತುತ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು

**ಸಂಶೋಧನಾ ಪ್ರಶ್ನೆಗಳು**

- ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾಸ್ತವದ ಹಿನ್ನೆಲೆಯಲ್ಲಿ ಕರ್ನಾಟಕದ ದಲಿತ ಸಂಘರ್ಷದ ನಿರ್ದಿಷ್ಟತೆ ಮತ್ತು ವೈಶಿಷ್ಟ್ಯತೆಗಳೇನು?
- ಕರ್ನಾಟಕದ ದಲಿತ ಸಂಘರ್ಷ ಎದುರಿಸಿದ ತಾತ್ತ್ವಿಕ ಸಮಸ್ಯೆಗಳು ಹಾಗೂ ರಾಜಕೀಯ ಸವಾಲುಗಳು ಯಾವುವು?
- ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ತಾತ್ತ್ವಿಕ ರಾಜಕೀಯ ನಡು ಪ್ರವೇಶವನ್ನು ಯಶಸ್ವಿ ಎಂದು ಪರಿಗಣಿಸಬಹುದೇ? ಅಲ್ಲವಾದರೆ ಕಾರಣಗಳೇನು?
- ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ವಿಘಟನೆಗೆ ಕಾರಣಗಳೇನು?
- ಈ ವಿಘಟನೆ ಕಾರಣಗಳನ್ನು ಎಷ್ಟರ ಮಟ್ಟಿಗೆ ಅದರ ತಾತ್ತ್ವಿಕತೆಯಲ್ಲಿ ಕಂಡುಕೊಳ್ಳಬಹುದು.

**ಸಾಹಿತ್ಯ ಸಮೀಕ್ಷೆ**

ಪ್ರಸ್ತುತ ಅಧ್ಯಯನ ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಸೈದ್ಧಾಂತಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಮಾಡುವುದರಿಂದ ತಾತ್ವಿಕವಾಗಿ ಪ್ರಮುಖವಾಗುವ ಪಠ್ಯ ರೂಪದ ಬರವಣಿಗೆಗಳ ಸಮೀಕ್ಷೆ ಈ ಅಧ್ಯಯನದಲ್ಲಿ ಮುಖ್ಯವಾಗುತ್ತದೆ. ಹಾಗಾಗೀ, ಭಾರತದ ಮತ್ತು ಕರ್ನಾಟಕದ ದಲಿತ ಹೋರಾಟದ ಚರಿತ್ರೆ ಹಾಗೂ ಸಿದ್ಧಾಂತಗಳನ್ನು ವಿಶ್ಲೇಷಿಸುವ ತಾತ್ತ್ವಿಕ ಬರಹಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಅಂಬೇಡ್ಕರ್, ಬಿ.ಆರ್ (1936) ರವರ 'ಆನಿಲೇಶನ್ ಆಫ್ ಕಾಸ್ಟ್' ಮತ್ತು 'ವಾಟ್ ಗಾಂಧಿ ಆಂಡ್ ಕಾಂಗ್ರೆಸ್ ಹಾವ್ ಡನ್ ಟು ಅನ್ ಟಚೆಬಲ್ಸ್ (1945) ಈ ಎರಡು ಗ್ರಂಥಗಳು ಭಾರತದಲ್ಲಿ ದಲಿತ ಚಿಂತನೆ ಮೂಲಭೂತವಾದ ಆಕರ ಗ್ರಂಥಗಳು. ಅಂಬೇಡ್ಕರ್ ಭಾರತದಲ್ಲಿ ಜಾತಿ ಅಸಮಾನತೆ ಮತ್ತು ಜಾತಿ ವಿನಾಶದ ಕುರಿತು ಮೂಲಭೂತವಾಗಿ ಚಿಂತಿಸಿದ ಮತ್ತು ಆ ದಿಶೆಯಲ್ಲಿ ನಿರಂತರವಾಗಿ ಕ್ರಿಯಾಶೀಲರಾದ ಚಿಂತಕ ಮತ್ತು ನಾಯಕ. ಅವರು ಕೇವಲ ದಲಿತ ನಾಯಕರಲ್ಲ. ಬದಲಾಗಿ ಅಸಮಾನ ಸಮಾಜವೊಂದರಲ್ಲಿ ಎಲ್ಲರನ್ನು ಒಳಗೊಳ್ಳುವ ಅರ್ಥಪೂರ್ಣವಾದ ಹಾಗೂ ಪರಿಣಾಮಕಾರಿಯಾದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ತಾತ್ತ್ವಿಕವಾಗಿ ಮತ್ತು ಸಾಂಸ್ಥಿಕವಾಗಿ ರೂಪಿಸಲು ಯತ್ನಿಸಿದ ಚಿಂತನ ಶೀಲ ನಾಯಕ. ಅವರು 1936ರಲ್ಲಿ ಮಂಡಿಸಿದ 'ಆನಿಲೇಶನ್ ಆಫ್ ಕಾಸ್ಟ್' ಎನ್ನುವ ಭಾಷಣ ರೂಪದ ಪುಸ್ತಕ ಜಾತಿ ವ್ಯವಸ್ಥೆಯ ಸ್ವರೂಪ ಹಾಗೂ ಜಾತಿ ವಿನಾಶದ ರಾಜಕಾರಣದ ಕುರಿತು ವ್ಯವಸ್ಥಿತವಾಗಿ ಚಿಂತನೆ ನಡೆಸಿದ ಪ್ರಪ್ರಥಮ ಗ್ರಂಥ. ಜಾತಿ ವ್ಯವಸ್ಥೆಯನ್ನು ಮೆಟ್ಟಿಲುಗಳಿಲ್ಲದ ಅನೇಕ ಅಂತಸ್ತುಗಳ ಕಟ್ಟಡ ಎಂದು ಬಣ್ಣಿಸಿದ ಅವರು ಜಾತಿ ವಿನಾಶಕ್ಕಾಗಿ ಭಾರತದಲ್ಲಿ ನಡೆಯಬೇಕಾದ ಮೂಲಭೂತ ಹೋರಾಟದ ಶಂಖ ಧ್ವನಿಯನ್ನು ಅವರು ಈ ಬರಹದಲ್ಲಿ ಮಾಡುತ್ತಾರೆ. ಭಾರತದ ಜಾತಿ ವ್ಯವಸ್ಥೆಯನ್ನು ಸಮರ್ಥಿಸುತ್ತದೆ ಮತ್ತು ಸಮುದಾಯದ ಆಧಾರದಲ್ಲಿ ವಿಭಜಿಸುವ ಪ್ರಕ್ರಿಯೆಯಿಂದ ನಿರ್ಮಾಣವಾಗಿರುವ ಸಾಮಾಜಿಕ ಶ್ರೇಣಿಕರಣವು ಹಿಂದೂ ಧರ್ಮದ ತತ್ತ್ವಜ್ಞಾನದಿಂದ ಉಗಮಿಸುತ್ತದೆ. ಜಾತಿವ್ಯವಸ್ಥೆಯ ಶೋಷಣೆ ಮತ್ತು ಪ್ರತ್ಯೇಕತೆಯು ಧರ್ಮದ ನೇರ ಪರಿಣಾಮ ಎಂದು ವಾದಿಸುವ ಅಂಬೇಡ್ಕರ್ ಸಮಸಮಾಜದ ನಿರ್ಮಾಣಕ್ಕೆ ಭಾರತ ಧರ್ಮದ ಶ್ರೇಣಿಗಳನ್ನು ತ್ಯಜಿಸಬೇಕೆಂದು ಈ ಬರಹದಲ್ಲಿ ಸೂಚಿಸುತ್ತಾರೆ.

ಗೈಲ್ ಓಂವೆಡ್ತ್ (1994) ರವರು ತಮ್ಮ 'ದಲಿತ್ಸ್ ಅಂಡ್ ದಿ ಡೆಮೊಕ್ರೆಟಿಕ್ ರೆವಲ್ಯೂಶನ್ ಅಂಡ್ ಅಂಬೇಡ್ಕರ್ ದಲಿತ್ ಮೂವ್‌ಮೆಂಟ್' ಗ್ರಂಥದಲ್ಲಿ ಭಾರತದ ದಲಿತ ಚಿಂತನೆ ಹಾಗೂ ಹೋರಾಟಗಳ ಕುರಿತು ವಿಶೇಷ ಅಧ್ಯಯನವನ್ನು ನಡೆಸಿದ್ದಾರೆ. ಅಂಬೇಡ್ಕರ್ ಚಿಂತನೆ ಹಾಗೂ ಆಧುನಿಕ ಭಾರತದ ಪ್ರಜಾತಾಂತ್ರಿಕ ರಾಜಕಾರಣದ ಕುರಿತು ವಿಶೇಷ ಆಸಕ್ತಿಯನ್ನು ಹೊಂದಿರುವ ಓಂವೆಡ್ತ್ ಭಾರತದ ದಲಿತ ಹೋರಾಟದ ಚರಿತ್ರೆಯು ಓರ್ವ ವಿಶೇಷ ತಜ್ಞೆ, ಅವರು 1993ರಲ್ಲಿ ಪ್ರಕಟಿಸಿದ "ದಲಿತ್ಸ್ ಅಂಡ್ ದಿ ಡೆಮೊಕ್ರೆಟಿಕ್ ರೆವಲ್ಯೂಶನ್ ಅಂಡ್ ಅಂಬೇಡ್ಕರ್ ದಲಿತ್ ಮೂವ್‌ಮೆಂಟ್" ಪುಸ್ತಕ ದಲಿತ ಚಿಂತನೆ ಮತ್ತು ಹೋರಾಟಕ್ಕೆ ಸಂಬಂಧಿಸಿದ ಯಾವುದೇ ಅಧ್ಯಯನ ಗಮನಿಸಲೇಬೇಕಾದ ಬರಹ. ಈ ಪ್ರಮುಖ ಆಕರ ಗ್ರಂಥದಲ್ಲಿ ಓಂವೆಡ್ತ್ ಭಾರತದಲ್ಲಿ ದಲಿತ ಹೋರಾಟ ರೂಪುಗೊಂಡ ಸಂಕೀರ್ಣವಾದ ಚರಿತ್ರೆಯನ್ನು

ವಿಶೇಷಣಾತ್ಮಕವಾಗಿ ಚರ್ಚಿಸುತ್ತಾರೆ. ಅಂತೆಯೇ, ಈ ಹೋರಾಟ ಇತರ ಅನೇಕ ಸಾಮಾಜಿಕ ಹೋರಾಟಗಳ ಜೊತೆಗೆ ಹೊಂದಿರುವ ಸಂಬಂಧ, ಸಂಘರ್ಷ ಹಾಗೂ ವ್ಯತ್ಯಾಸಗಳನ್ನು ಅವರು ಗುರುತಿಸುತ್ತಾರೆ. ವಿಶೇಷವಾಗಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿ ಮುನ್ನಲೆಗೆ ಬಂದ ದಲಿತ ಹೋರಾಟದ ನೆಲೆ ಬೆಲೆಗಳನ್ನು, ಓ್ಯಂವೆಡ್ತ್ ಈ ಬರಹದಲ್ಲಿ ಚರ್ಚಿಸುತ್ತಾರೆ. ಅಷ್ಟು ಮಾತ್ರವಲ್ಲದೇ 20ನೆ ಶತಮಾನದ ದಲಿತ ಹೋರಾಟ ಅತ್ಯಂತ ಪ್ರಮುಖ ನಾಯಕರಾದ ಅಂಬೇಡ್ಕರ್ ಚಿಂತನೆಯನ್ನು ಕೇಂದ್ರದಲ್ಲಿರಿಸಿ ಈ ಬರಹ ಭಾರತದ ಪ್ರಜಾತಾಂತ್ರಿಕ ರಾಜಕಾರಣದ ಅವಿಭಾಜ್ಯ ಭಾಗವನ್ನಾಗಿ ದಲಿತ ಹೋರಾಟವನ್ನು ಗುರುತಿಸುತ್ತದೆ.

ಎಳೆಯನೊರ್ ಜ್ಲಿಓಟ್ (1996) ರವರ 'ಫ್ರಮ್ ಅನ್‌ಟಚಬಲ್ ಟು ದಲಿತ್: ಎಸ್ಸೆಸ್ ಆನ್ ದಿ ಅಂಬೇಡ್ಕರ್ ಮೂವ್‌ಮೆಂಟ್' ಗ್ರಂಥವು ದಲಿತ ಚಿಂತನೆ ಮತ್ತು ಹೋರಾಟವನ್ನು ತಾತ್ತ್ವಿಕ ಹಾಗೂ ಅನುಭಾವಿತ ವಿಶ್ಲೇಷಣೆಯನ್ನು ಮಾಡುತ್ತದೆ. ಈ ಗ್ರಂಥದಲ್ಲಿ ವಿಯೆಟ್ನಾಮ್ ಮೂಲದ ಈ ಲೇಖಕಿ ದಲಿತ ಹೋರಾಟ ಹಾಗೂ ಅಂಬೇಡ್ಕರ್ ಚಿಂತನೆಯ ಕುರಿತು ಅಪಾರವಾದ ಮಾಹಿತಿಯನ್ನು ಹೊಂದಿರುವ ಇವರು ತಮ್ಮ ದತ್ತಾಂಶದ ಬಗೆಗಿನ ನಿಖರತೆ ಹಾಗೂ ತಾತ್ತ್ವಿಕ ಸ್ಪಷ್ಟತೆಗಳಿಂದ ನಮ್ಮನ್ನು ಬೆರಗುಗೊಳಿಸುತ್ತಾರೆ. ಅಂಬೇಡ್ಕರ್ ಚಿಂತನೆ ರೂಪುಗೊಂಡ ವಿವಿಧ ಕಾಲಘಟ್ಟಗಳು ಪ್ರತಿಪಾದನೆಗಳ ಕುರಿತು ಕರಾರುವತ್ತಾಗಿ ಬರೆಯುವ ಎಲಿಯಾನಾರ್ ಜಿಯೆಲೆಟ್ ಈ ಗ್ರಂಥ ಭಾರತದ ದಲಿತ ಚಿಂತನೆಯ ಹಾಗೂ ಹೋರಾಟದ ಬಗ್ಗೆ ವಿವರಿಸುತ್ತದೆ.

ಭಾರತದ ಪ್ರಮುಖ ದಲಿತ ಚಿಂತಕ ಗೋಪಾಲ್ ಗುರು (2011) ಸಂಪಾದಿಸಿ ಪ್ರಕಟಿಸಿದ 'ಹುಮಿಲಿಯೇಶನ್' ಗ್ರಂಥವು ಅನೇಕ ಹೋರಾಟಗಳು ಎದುರಿಸುವ ಅವಮಾನದ ಸಮಸ್ಯೆಯನ್ನು ತಾತ್ತ್ವಿಕವಾಗಿ ವಿಶ್ಲೇಷಿಸುತ್ತದೆ. ಈ ದೇಶದ ಪ್ರಮುಖ ಚಿಂತಕರುಗಳಾದ ಆಶಿಶ್ ನಂದಿ, ಸುದೀಪ್ ತೊ ಕವಿರಾಜ್, ವಲೇರಿಯನ್ ರೋಡ್ರಿಗಸ್, ಬಿಕುಪಾರೇಕ್, ಉಪೇಂದ್ರ ಬಕ್ಷಿ ಮೊದಲಾದವರ ಲೇಖನಗಳನ್ನು ಒಳಗೊಂಡಿರುವ ಈ ಪುಸ್ತಕ ಅವಮಾನ ಎನ್ನುವ ಅತ್ಯಂತ ಸಂಕೀರ್ಣವಾದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಮಾನಸಿಕ ವಿದ್ಯಮಾನವನ್ನು ತಾತ್ತ್ವಿಕವಾಗಿ ಪರಿಶೀಲಿಸುತ್ತದೆ. ಭಾರತದ ದಲಿತ ಚಿಂತನೆ ಮತ್ತು ಹೋರಾಟದ ತಾತ್ತ್ವಿಕ ಅಧ್ಯಯನಕ್ಕೆ ಈ ಬರಹ ಸಂಗ್ರಹ ಅತ್ಯಂತ ಪ್ರಮುಖವಾದ ಆಕರವಾಗಿದೆ.

ಗಣಶ್ಯಾಮ್ ಶಾ (1976) ತಮ್ಮ 'ಸೋಶಿಯಲ್ ಮೂಮ್‌ಮೆಂಟ್ ಇನ್ ಇಂಡಿಯಾ' ಎಂಬ ಗ್ರಂಥದಲ್ಲಿ ಭಾರತದಲ್ಲಿ ನಡೆದ ವಿವಿಧ ಬಗೆಯ ಸಾಮಾಜಿಕ ಹೋರಾಟಗಳ ಕುರಿತು ಸಮಗ್ರವಾದ ನೋಟವನ್ನು ನೀಡುತ್ತದೆ. 20ನೇ ಶತಮಾನದ ಆರಂಭ ಕಾಲದಿಂದ 70ರ ದಶಕ ತನಕ ಭಾರತದಲ್ಲಿ ಸಂಭವಿಸಿದ ವಿವಿಧ ಬಗೆಯ ದಲಿತ ಹೋರಾಟಗಳ ಸ್ವರೂಪ ಹಾಗೂ ಪರಿಣಾಮಗಳನ್ನು ಶಾರವರ ಈ ಬರಹ ಚರ್ಚಿಸುತ್ತದೆ. 20ನೇ ಶತಮಾನದಲ್ಲಿ ಭಾರತದಲ್ಲಿ ನಡೆದ ದಲಿತ ಹೋರಾಟಗಳನ್ನು 2 ರೀತಿಯಾಗಿ ವರ್ಗೀಕರಿಸಬಹುದು. ಅದರಲ್ಲಿ ಮೊದಲನೆಯದು, ಸುಧಾರಣಾ ಸ್ವರೂಪದ ಹೋರಾಟ ಎರಡನೆಯದು, ಮೂಲಭೂತ ಪರಿವರ್ತನೆಯನ್ನು ಬಯಸಿದ ಪರ್ಯಾಯ ಹೋರಾಟ. ಸುಧಾರಣಾ ಸ್ವರೂಪದ ಮೊದಲನೆಯ ಹೋರಾಟ ಜಾತಿ ಅಸಮಾನತೆಯ ಮೂಲಭೂತ ಪ್ರಶ್ನೆಯನ್ನು ಬದಿಗೆ ಸರಿಸಿ ಅಸ್ಪೃಶ್ಯತೆಯ ನಿವಾರಣೆಯ ವಿರುದ್ಧ ಮಾತ್ರ ತನ್ನ ಗಮನಹರಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ ಕ್ರಾಂತಿಕಾರಿ ಸ್ವರೂಪದ

ಪರ್ಯಾಯ ಹೋರಾಟ ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಪ್ರಶ್ನೆಗಳನ್ನು ಮುಂದಿರಿಸಿ ಮೂಲಭೂತ ಸಾಮಾಜಿಕ ಹಾಗೂ ರಾಜಕೀಯ ಪರಿವರ್ತನೆಯ ಕಡೆಗೆ ಗಮನವನ್ನು ಕೇಂದ್ರಿಕರಿಸಿದೆ. ಗಣಶ್ಯಾಮ್ ಶಾರವರು ವಿಶ್ಲೇಷಿಸಿದ ದಲಿತ ಹೋರಾಟದ ಈ ಚರಿತ್ರೆ ದಲಿತ ಚಳುವಳಿಯ ತಾತ್ತ್ವಿಕ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಲ್ಲಿ ನಮ್ಮ ಸಹಾಯಕ್ಕೆ ಬರುತ್ತದೆ.

ಆನಂದ್ ತೇಲ್ತುಂಬ್ಡೆ (2017) **'ದಲಿತ್ಸ್: ಪಾಸ್ಟ್, ಪ್ರೆಸೆಂಟ್ ಆಂಡ್ ಫ್ಯೂಚರ್'** ಎಂಬ ಗ್ರಂಥದಲ್ಲಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತ ಹೋರಾಟ ಕಂಡುಕೊಂಡ ದಿಕ್ಕು ದಿಸೆಗಳ ಕುರಿತು ವಿಶೇಷವಾದ ಅಧ್ಯಯನವನ್ನು ನಡೆಸಿದ ಆನಂದ್ ತೇಲ್ತುಂಬ್ಡೆರವರು ದಲಿತ ಹೋರಾಟಗಳು ಎದುರಿಸುವ ತಾತ್ತ್ವಿಕ ಸಮಸ್ಯೆಗಳನ್ನು ಮತ್ತು ರಾಜಕೀಯ ಸವಾಲುಗಳನ್ನು ಈ ಗ್ರಂಥದಲ್ಲಿ ಚರ್ಚಿಸಿರುತ್ತಾರೆ. ದಲಿತ ಚಿಂತನೆ ಮತ್ತು ಹೋರಾಟದ ಬಗೆಗಿನ ಯಾವುದೇ ಅಧ್ಯಯನಕ್ಕೆ ಈ ಗ್ರಂಥ ಸೂಕ್ತವಾದ ಮಾರ್ಗದರ್ಶನವನ್ನು ಮಾಡುತ್ತದೆ.

**ಉಪಸಂಹಾರ**

ಕರ್ನಾಟಕದಲ್ಲಿ 1970ರ ದಶಕದಲ್ಲಿ ಪ್ರವರ್ಧಮಾನಕ್ಕೆ ಬಂದ ದಲಿತ ಸಂಘರ್ಷ ಸಮಿತಿಯು ಜಾತಿ ರಹಿತ, ವರ್ಗ ರಹಿತವಾಗಿ ಶೋಷಣೆಯ ವಿರುದ್ಧ ಹೋರಾಡಿದೆ. ಇಂತಹ ಹೋರಾಟಗಳಲ್ಲಿ ಹಲವಾರು ಸೈದ್ಧಾಂತಿಕ ಹಿನ್ನೆಲೆಯಿಂದ ಬಂದಂತಹ ಹೋರಾಟಗಾರರು ವಿವಿಧತೆಯಲ್ಲಿ ಏಕತೆಯನ್ನು ಪ್ರದರ್ಶಿಸಿ, ಸಾಮಾಜಿಕ ಸಮಾನತೆ ಹಾಗೂ ಮಾನವ ಶೋಷಣೆಯ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸಿ, ಸಾಮಾಜಿಕ ಸುಧಾರಣೆಗೆ ಶ್ರಮಿಸಿದ್ದಾರೆ. ದಲಿತ ಸಂಘರ್ಷ ಸಮಿತಿಯ ಹೋರಾಟಗಾರರು, ಬಂಡಾಯ ಸಾಹಿತಿಗಳು ಈ ಸಾಲಿಗೆ ಸೇರುತ್ತಾರೆ. ಕರ್ನಾಟಕದಲ್ಲಿ 'ದಲಿತ ಸಂಘರ್ಷ ಸಮಿತಿ'ಯ ಸಂಸ್ಥಾಪಕರಲ್ಲಿ ಒಬ್ಬರಾದ ಪ್ರೊ. ಬಿ. ಕೃಷ್ಣಪ್ಪನವರು ಪ್ರಾರಂಭದಲ್ಲಿ ಸಮಾಜವಾದಿ ಹಿನ್ನೆಲೆಯಲ್ಲಿ ಬಂದರೂ ಸಹ ತದನಂತರ ಸಂಪೂರ್ಣವಾಗಿ ಡಾ. ಅಂಬೇಡ್ಕರ್ ಅವರ ಪರಮ ಅನುಯಾಯಿಯಾಗಿದ್ದರು. ಇವರ ಜೊತೆ ಕೈ ಜೋಡಿಸಿದವರೆಂದರೆ ದೇವನೂರು ಮಹಾದೇವ, ನಾರಾಯಣ, ನಾರಯಣದಾಸ್, ಸಿ. ಬಿ. ನಂಜುಂಡಪ್ಪ, ಇನ್ನಿತರರು. ಕರ್ನಾಟಕದಲ್ಲಿ ಶೈಕ್ಷಣಿಕ, ಆರ್ಥಿಕ, ರಾಜಕೀಯ ರಂಗದಲ್ಲಿ ದಲಿತರ ಏಳಿಗೆಯ ಪರಮ ಗುರಿಯಾಗಿತ್ತು. ಇದರಂತೆ ಅಲ್ಪ ಮುನ್ನಡೆಯನ್ನೂ ಸಾಧಿಸಿದರು. ಆದರೆ ಶೈಕ್ಷಣಿಕ, ಆರ್ಥಿಕ ಏಳಿಗೆಯನ್ನು ಸವರ್ಣೀಯರು ಸಹಿಸದಾದರು. ಅದರ ಫಲವೇ ದಲಿತ ಸಂಘರ್ಷ ಸಮಿತಿಯ ಹೋರಾಟಗಳು ಅವುಗಳೇ ದಲಿತ ಪರವಾದ ಚಳವಳಿಗಳು. ಈ ಚಳುವಳಿಯ ಹಿನ್ನಲೆ ದೃಷ್ಟಿಯಿಂದ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೇಲಿನ ಅನೇಕ ಗ್ರಂಥಗಳನ್ನು ಸಾಹಿತ್ಯ ಪರಾಮರ್ಶಗೆ ಒಳಪಡಿಸಿ ಚರ್ಚಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಎಳೆಯನೊರ್ ಜ್ಲಿಬಟ್ (1996). *ಫ್ರಮ್ ಅನ್‌ಟಚಬಲ್ ಟು ದಲಿತ್: ಎಸ್ಸೆಸ್ ಆನ್ ದಿ ಅಂಬೇಡ್ಕರ್ ಮೂವ್‌ಮೆಂಟ್.* ಮನೋಹರ ಪಬ್ಲಿಕೇಷನ್, ನವದೆಹಲಿ.

- ಅಂಬೇಡ್ಕರ್, ಬಿ.ಆರ್. (1945). ಆನಿಲೇಶನ್ ಆಫ್ ಕಾಸ್ಟ್, ಗೌತಮ್ ಬುಕ್ ಸೆಂಟರ್, ನವದೆಹಲಿ,
- ಅಂಬೇಡ್ಕರ್, ಬಿ.ಆರ್. (1936). ವಾಟ್ ಗಾಂಧಿ ಆಂಡ್ ಕಾಂಗ್ರೆಸ್ ಹಾವ್ ಡನ್ ಟು ಅನ್ ಟಚೆಬಲ್ಸ್, ಗೌತಮ್ ಬುಕ್ ಸೆಂಟರ್, ನವದೆಹಲಿ.
- ಆನಂದ್ ತೇಲ್ತುಂಬ್ಡೆ. (2017). *ದಲಿತ್ಸ್: ಪಾಸ್ಟ್, ಪ್ರೆಸೆಂಟ್ ಆಂಡ್ ಫ್ಯೂಚರ್.* ನ್ಯೂಯಾರ್ಕ್.
- ಆನಂದ್ ತೇಲ್‌ತುಂಬ್ಡೆ, (2009). ಹಿಂದುತ್ವ ಮತ್ತು ದಲಿತರು ಕೋಮುವಾದಿ ರಾಜಕಾರಣ ಒಂದು ತಾತ್ವಿಕ ಪರಾಮರ್ಶೆ. (ಅನು: ಗಂಗಾಧರಮೂರ್ತಿ ಬಿ). ಚಿಂತನ ಪುಸ್ತಕ, ಬೆಂಗಳೂರು.
- ಗೈಲ್ ಆ್ಯಂವೆಡ್ತ್. (1994). *ದಲಿತ್ಸ್ ಅಂಡ್ ದಿ ಡೆಮೊಕ್ರೆಟಿಕ್ ರೆವಲ್ಯೂಶನ್ ಅಂಡ್ ಅಂಬೇಡ್ಕರ್ ದಲಿತ್ ಮೂವ್‌ಮೆಂಟ್.* ಸೇಜ್ ಪಬ್ಲಿಕೇಶನ್, ನವದೆಹಲಿ.
- ಗಣಶ್ಯಾಮ್ ಶಾ. (1976). *ಸೋಶಿಯಲ್ ಮೂಮ್‌ಮೆಂಟ್ ಇನ್ ಇಂಡಿಯಾ.*
- ಗೋಪಾಲ್ ಗುರು. (2011). *ಹುಮಿಲಿಯೇಶನ್.* ಒಯುಪಿ, ನವದೆಹಲಿ.
- ಮರಿಸ್ವಾಮಿ. ವೈ. (2009, ಜೂನ್). ಜಾತಿ ರಾಜಕಾರಣ ಮತ್ತು ಸಾಮಾಜಿಕ ನ್ಯಾಯ. ಸಂವಾದ ಮಾಸ ಪತ್ರಿಕೆ.
- ಮೊಗಳ್ಳಿ ಗಣೇಶ್. (2002). ದಲಿತ ಚಿಂತನೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ಮುನಿ ವೆಂಕಟಪ್ಪ ವಿ. (2009). *ದಲಿತ ಚಳುವಳಿಯ ಚರಿತ್ರೆ.* ತನುಮನ ಪ್ರಕಾಶನ, ಮೈಸೂರು.